

(8ನೇ ಪುಟದಿಂದ)

# ಸುಲ್ತಾನ್ ಬತ್ತೇರಿ

ಈ ಕಾವಲು ಗೋಪುರವನ್ನು ಬೃಹತ್ ಕೋಟೆಯಂತೆಯೇ ಕಟ್ಟಿಸಲಾಗಿತ್ತು. ಫಿರಂಗಿಗಳ ಮೂಲಕ ಗುಂಡುಗಳನ್ನು ಹಾರಿಸಲು ಅನುಕೂಲವಾಗುವಂತೆಯೇ ಈ ವೀಕ್ಷಣಾ ಗೋಪುರವನ್ನು ನಿರ್ಮಿಸಲಾಗಿದೆ.

ಇದು ಕಾವಲು ಗೋಪುರವಾದರೂ 40ರಿಂದ 60 ಅಡಿ ಎತ್ತರವಿದೆ. ನಿರ್ಮಾಣಕ್ಕೆ ಬೃಹತ್ತಾದ ಬಂಡೆ ಕಲ್ಲುಗಳನ್ನು ಬಳಸಿದ್ದು, ಯಾವುದೇ ತಳಪಾಯ ಇಲ್ಲದೆ ಕಟ್ಟಿರುವುದು ಈಗಿನ ಎಂಜಿನಿಯರುಗಳಿಗೂ ಸವಾಲಿನ ಸಂಗತಿ. ಮೊದಲು ಬಿದನೂರು ಕೋಟೆಯನ್ನು ಆಕ್ರಮಿಸಿದ ಟಿಪ್ಪು ಸುಲ್ತಾನ್, ನಂತರ 1794ರಲ್ಲಿ ತನ್ನ ತಾಯಿ ಜಮಲಾಬಿಯ ನೆನಪಿಗಾಗಿ ಕಲ್ಲಿನ ಕೋಟೆಯೊಂದನ್ನು ಕಟ್ಟಿಸಿದ್ದು ಅದು ಈಗಲೂ ಜಮಾಲಾಬಾದ್ ಕೋಟೆ ಎಂದೇ ಹೆಸರಾಗಿದೆ. ಬಿದನೂರು ಕೋಟೆಯಿಂದ ಇಳಿದರೆ ಜಮಲಾಬಾದ್ ಕೋಟೆಗೆ ಬರಬಹುದು.

ಆದರೆ ಜಮಲಾಬಾದ್ ಕೋಟೆ ಮಂಗಳೂರು ನಗರದಿಂದ ಬಹುದೂರವಿದೆ. ಹಾಗಾಗಿ ನದೀ ತೀರದ ಮಂಗಳೂರನ್ನು ರಕ್ಷಿಸಲು ಕಾವಲು ಕೋಟೆ ಸುಲ್ತಾನ್ ಬತ್ತೇರಿಯನ್ನು ನಿರ್ಮಿಸಲಾಯಿತು. ಈ ಕೋಟೆ ಈಗಲೂ ಎಲ್ಲೂ ಬಿರುಕು ಬಿಟ್ಟಿಲ್ಲ. ಗೋಪುರದಲ್ಲಿ 40 ವೀಕ್ಷಣಾ ಕಿಂಡಿಗಳಿವೆ. ಬೃಹತ್ ಕಲ್ಲನ್ನೇ ಕೊರೆದು ಕಿಂಡಿ ನಿರ್ಮಿಸಲಾಗಿದೆ.

ಬಿದನೂರಿನ ಕೋಟೆಯ ಹೊರವಲಯ ಮಾತ್ರ ಗಟ್ಟಿಯಾಗಿದ್ದು ಉಳಿದದ್ದೆಲ್ಲಾ ನಶಿಸಿ ಪಾಳು ಬಿದ್ದಿದೆ. ಹಾಗೆಯೇ ಗಡಾಯಿಕಲ್ಲಿನ ಕೋಟೆಯೂ ನಶಿಸಿಹೋಗಿದೆ. ಸುರಕ್ಷಿತವಾಗಿ ಉಳಿದಿರುವುದು ಬೃಹತ್ ಕೋಟೆಯಂತಿರುವ ಈ ವೀಕ್ಷಣಾ ಗೋಪುರ ಸುಲ್ತಾನ ಬತ್ತೇರಿ ಮಾತ್ರ. ಮಂಗಳೂರಿನ ಹೊರವಲಯದಲ್ಲಿರುವ ಈ ಪ್ರಶಾಂತ ಸ್ಥಳಕ್ಕೆ ಪ್ರತಿದಿನ ನೂರಾರು ಪ್ರವಾಸಿಗರು ಬರುತ್ತಾರೆ. ಆದರೆ ಕೋಟೆಯ ಎದುರುಗಡೆ ಸಿಮೆಂಟಿನ ಗಾರೆ ಮಾಡಿ ಅದರ ಅಂದ ಕೆಡಿಸಿದ್ದಾರೆ ಎಂದೇ ಹೇಳಬೇಕು. ಅದನ್ನು ಯಥಾಸ್ಥಿತಿಯಲ್ಲಿಯೇ ಇರಿಸಿದ್ದರೆ ಇನ್ನೂ ಅದ್ಭುತವಾಗಿ ಕಾಣುತ್ತಿತ್ತು. ಈ ಗೋಪುರದ ಹಿನ್ನೆಲೆಯಲ್ಲಿ ಗುರುಪುರ ನದಿಯಿದ್ದು, ಛಾಯಾಗ್ರಾಹಕರ ಮನತಣಿಸುವ ಸ್ಥಳದಂತಿದೆ. ■

